# ಗ್ರಾಮ ಸ್ವರಾಜ್ಯದ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರ ಅಗತ್ಯವಾಗಿ ಕೈಗೊಳ್ಳಬೇಕಾದ ಕ್ರಮಗಳು

ತಯಾರಿಸಿದವರು: ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಾಲಯ
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್

1. ಜವಾಬ್ದಾರಿ ನಕ್ಷೆಯನ್ನು ನಿಯಮವಾಗಿ ಕಾಯಿದೆಯ ಭಾಗವನ್ನಾಗಿಸುವುದು
2. ತ್ರಿಸ್ಥರ ಪಂಚಾಯತ್‌ಗಳಿಗೆ ಹೊಣೆಗಳೊಂದಿಗೆ (ಕಾರ್ಯಗಳೊಂದಿಗೆ) ಹಣಕಾಸು (ಅನುದಾನ) ಮತ್ತು ಹೊಣೆಗಾರರ (ಸಿಬ್ಬಂದಿಗಳ) ಹಸ್ತಾಂತರ:
3. ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಯೋಜಿಸುವ ಹಾಗೂ ಪಡೆದುಕೊಳ್ಳುವ ಅಧಿಕಾರ ಗ್ರಾಮ ಪಂಚಾಯತ್‌ನದ್ದು
4. ಯಾವುದೇ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯ ಹಕ್ಕು ಮತ್ತು ಅಧಿಕಾರ ಗ್ರಾಮ ಸಭೆಯದ್ದು
5. ಜನಭಾಗವಹಿಸುವಿಕೆಯಲ್ಲಿ ಗ್ರಾಮಸಭೆಯ ಸಹಭಾಗಿತ್ವದೊಂದಿಗೆ ತಯಾರಿಸಿದ ಯೋಜನೆಗಳ ಆಧಾರದ ಮೇಲೆ ರಾಜ್ಯ ಯೋಜನೆ ಮತ್ತು ಬಜೆಟ್‌ಗಳ ತಯಾರಿಕೆ

**ವಿವರಗಳು:**

**1. ಜವಾಬ್ದಾರಿ ನಕ್ಷೆಯನ್ನು ನಿಯಮವಾಗಿ ಕಾಯಿದೆಯ ಭಾಗವನ್ನಾಗಿಸುವುದು**

ಈಗಾಗಲೇ ಪಂಚಾಯತ್ ರಾಜ್ ಇಲಾಖೆಯು ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ವಿಷಯವಾಗಿ ಈ ಹಿಂದೆ ಇರುವ ಸುತ್ತೋಲೆಗಳನ್ನು ಹಿಂಪಡೆದು ಹೊಸದಾಗಿ ಹೊರಡಿಸಿರುವ ಸುತ್ತೋಲೆಯೂ ಕಾಯಿದೆಯ ಉಲ್ಲೇಖ ಮತ್ತು ಉದ್ದೇಶವನ್ನು ಪರಿಗಣಿಸಿಲ್ಲ. (19-11-2016ರ ಸುತ್ತೋಲೆ) ಬದಲಾಗಿ 29 ವಿಷಯಗಳ ಕುರಿತಾಗಿ ಕಾಯಿದೆಯ ಭಾಗವಾಗಿದ್ದ ಅನುಸೂಚಿಗಳನ್ನೇ ಕಾರ್ಯಚಟುವಟಿಕೆ ನಕ್ಷೆ ಎಂದು ಪರಿಗಣಿಸಲಾಗಿದೆ. ಈಗ ಕಾರ್ಯಚಟುವಟಿಕೆ/ಪ್ರಕಾರ್ಯಗಳು ಎಂದು ಇಲಾಖೆಯು ಹೊರಡಿಸಿರುವ ಸುತ್ತೋಲೆಯು ಮೂರೂ ಹಂತದ ಸರ್ಕಾರಗಳ ಅನುಸೂಚಿಯಾಗಿದೆ **(ಉಲ್ಲೇಖ: ಅಧ್ಯಾಯ 4, ಪ್ರಕರಣ 58, ಅಧ್ಯಾಯ 8, ಪ್ರಕರಣ 145, ಅಧ್ಯಾಯ 11, ಪ್ರಕರಣ 184)** ಹೀಗಾಗಿ ಈ ಅನುಸೂಚಿಗಳ ಆಧಾರದ ಮೇಲೆ ತ್ರಿಸ್ಥರ ಪಂಚಾಯತ್ ವ್ಯವಸ್ಥೆಯಲ್ಲಿ ಮೂರೂ ಹಂತದ ಜವಾಬ್ದಾರಿಗಳನ್ನು ಸ್ಪಷ್ಟಪಡಿಸಲು ಜವಾಬ್ದಾರಿ ನಕ್ಷೆಯು ಸ್ಪಷ್ಟವಾಗಿ ಆಗಲೇಬೇಕು. ಈಗ ಮೂರೂ ಹಂತದ ಜವಾಬ್ದಾರಿಯ ಬಗ್ಗೆ ಗೊಂದಲವಿದೆ. ಯಾವುದೇ ಇಲಾಖೆಗಳು ಸ್ಥಳೀಯ ಸರ್ಕಾರಗಳಿಗೆ ಸಹಕಾರ ಕೊಡುತ್ತಿಲ್ಲ. ಬದಲಾಗಿ ಇಲಾಖೆಗಳು ಸ್ಥಳೀಯ ಸರ್ಕಾರಗಳ ಮೇಲೆ ಒಂದು ರೀತಿಯಲ್ಲಿ ಹೊರೆ ಮಾಡುತ್ತಿವೆ. ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಉಲ್ಲೇಖಿಸಿದಂತೆ ಮೂರೂ ಹಂತದ ಸ್ಥಳೀಯ ಸರ್ಕಾರಗಳಿಗೆ ಜವಾಬ್ದಾರಿ ನಕ್ಷೆ ಆಗಲೇ ಬೇಕು. **ಹೀಗಾಗಿ ಜವಾಬ್ದಾರಿ ನಕ್ಷೆಯನ್ನು ಗ್ರಾಮ ಸ್ವರಾಜ್ ಕಾಯಿದೆಯ ಭಾಗವನ್ನಾಗಿಸಲು ತಕ್ಷಣದಿಂದ ನಿಯಮಗಳನ್ನು ರೂಪಿಸಬೇಕು (ಉಲ್ಲೇಖ: 28-ಸಿ, 58(5), 309ಬಿ-3), ಅನುಸೂಚಿ-1)**. ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಉಲ್ಲೇಖಿಸಿದಂತೆ ವಿವಿಧ ಹಂತದ ಸರ್ಕಾರಗಳ ಜವಾಬ್ದಾರಿ ನಕ್ಷೆಯನ್ನು (ಕಾನೂನು ತಿದ್ದುಪಡಿ ಸಮಿತಿ ಶಿಫಾರಸ್ಸು ಮಾಡಿದಂತೆ) ನಿಯಮವಾಗಿ ರೂಪಿಸಿ ಕಾಯಿದೆಯ ಭಾಗವನ್ನಾಗಿಸಬೇಕು. ಈ ಜವಾಬ್ದಾರಿ ನಕ್ಷೆಯು ಸ್ಥಳೀಯ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ವಿವಿಧ ಹಂತದ ಸ್ಥಳೀಯ ಸರ್ಕಾರಗಳ ಹೊಣೆಯನ್ನು ಹೇಳುವುದರೊಂದಿಗೆ ಈ ಹೊಣೆಯೊಂದಿಗೆ ಹಸ್ತಾಂತರವಾಗಬೇಕಾದ ಹೊಣೆಗಾರರು ಮತ್ತು ಹಣಕಾಸನ್ನು ಸೂಚಿಸುವ ಮಾರ್ಗದರ್ಶಿ ಚೌಕಟ್ಟಿನ ಪ್ರಮುಖ ಸಾರವಾಗಿದೆ.

**2. ತ್ರಿಸ್ಥರ ಪಂಚಾಯತ್‌ಗಳಿಗೆ ಹೊಣೆಗಳೊಂದಿಗೆ (ಕಾರ್ಯಗಳೊಂದಿಗೆ) ಹಣಕಾಸು (ಅನುದಾನ) ಮತ್ತು ಹೊಣೆಗಾರರ (ಸಿಬ್ಬಂದಿಗಳ) ಹಸ್ತಾಂತರ:**

ತ್ರಿಸ್ಥರ ಪಂಚಾಯತ್‌ಗಳು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಅಗತ್ಯವೆನಿಸಬಹುದಾದಂಥ ಅಧಿಕಾರಗಳನ್ನು, ಪ್ರಾಧಿಕಾರವನ್ನು, ಪ್ರಕಾರ್ಯಗಳನ್ನು, ಕಾರ್ಯನಿರ್ವಾಹಕರನ್ನು ಮತ್ತು ನಿಧಿಗಳನ್ನು ರಾಜ್ಯವು ಗ್ರಾಮಪಂಚಾಯತ್‌ಗೆ ಪ್ರಧಾನ ಮಾಡತಕ್ಕದ್ದು. *(ಉಲ್ಲೇಖ: ಅಧ್ಯಾಯ 4, ಪ್ರಕರಣ*

*58, ಅಧ್ಯಾಯ 8, ಪ್ರಕರಣ 145, ಅಧ್ಯಾಯ 11, ಪ್ರಕರಣ 184).* ಉದಾಹರಣೆಗೆ ಬಾಪೂಜಿ ಸೇವಾ ಕೇಂದ್ರದ ಮೂಲಕ 100 ಸೇವೆಗಳ ಜವಾಬ್ದಾರಿ ಗ್ರಾಮ ಪಂಚಾಯತ್‌ಗಳಿಗೆ ನೀಡಲಾಗಿದೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಸಿಬ್ಬಂದಿಗಳು, ಹಣಕಾಸು ಪಂಚಾಯತ್‌ಗಳಿಗೆ ಹಸ್ತಾಂತರವಾಗಿಲ್ಲ. ತಕ್ಷಣದಲ್ಲಿ ಈ ಸೇವೆಗಳಿಗೆ ಸಂಬಂಧಿಸಿದ ಸಿಬ್ಬಂದಿಗಳು ಹಾಗೂ ಹಣಕಾಸು ಗ್ರಾಮ ಪಂಚಾಯತ್‌ಗಳಿಗೆ ಹಸ್ತಾಂತರವಾಗಬೇಕು. ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಹೇಳಿರುವಂತೆ ಗ್ರಾಮ ಪಂಚಾಯತ್‌ಗಳು ಮುಂಚೂಣಿ ಕಾರ್ಯಾಲಯವಾಗಿ ಕಾರ್ಯನಿರ್ವಹಿಸಬೇಕಾದರೆ **[ಉಲ್ಲೇಖ: ಅಧ್ಯಾಯ 4; ಪ್ರಕರಣ 58(4)]** ಗ್ರಾಮ ಪಂಚಾಯತ್‌ವು ಸರ್ಕಾರದ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಯಾಗಿರತಕ್ಕದ್ದು.

3. **ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಯೋಜಿಸುವ ಹಾಗೂ ಪಡೆದುಕೊಳ್ಳುವ ಅಧಿಕಾರ ಗ್ರಾಮ ಪಂಚಾಯತ್‌ನದ್ದು**
   ಗ್ರಾಮ ಸ್ವರಾಜ್ ಕಾಯಿದೆಯ ಪ್ರಕಾರ ಪಂಚಾಯತ್‌ನ ಚುನಾಯಿತ ಸದಸ್ಯರ ಮತ್ತು ಸಿಬ್ಬಂದಿಯ **ಕೌಶಲ್ಯ ಅಭಿವೃದ್ಧಿ** ಅಗತ್ಯಗಳನ್ನು ಗುರುತಿಸುವುದು, ಸೂಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಅಗತ್ಯ ಬಿದ್ದರೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ನೆರವಿನೊಂದಿಗೆ ಅವರ ಕೌಶಲದಲ್ಲಿ ಅಭಿವೃದ್ಧಿಯಾಗಿರುವುದನ್ನು ಸುನಿಶ್ಚಿತ ಪಡಿಸಿಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ಸಿದ್ಧಪಡಿಸಿಕೊಳ್ಳುವುದು ಮತ್ತು ಅನುಷ್ಠಾನಗೊಳಿಸಿಕೊಳ್ಳುವುದು ಗ್ರಾಮ ಪಂಚಾಯತ್‌ನ ಕರ್ತವ್ಯ ಹಾಗೂ ಅಧಿಕಾರವಾಗಿರುತ್ತದೆ **(ಉಲ್ಲೇಖ: ಅಧ್ಯಾಯ 4: ಪ್ರಕರಣ –58 (5 – vii)).** ಈಗ ಈ ಇಡೀ ಪ್ರಕ್ರಿಯೆಯು ANSSIRD ಯ ಮೂಲಕ ನಡೆಯುತ್ತಿದೆ. ಆದರೆ ಈ ಸಾಮರ್ಥ್ಯಾಭಿವೃದ್ಧಿ ತರಬೇತಿ ನಡೆಸುವ ಸಂಪೂರ್ಣ ಜವಾಬ್ದಾರಿ ಸ್ಥಳೀಯ ಸ್ವಾಯತ್ತ ಸರ್ಕಾರವಾದ ಗ್ರಾಮ ಪಂಚಾಯತ್‌ನದ್ದಾಗಿರುತ್ತದೆ. ಹೀಗಾಗಿ ಮೂರೂ ಹಂತದ ಸ್ಥಳೀಯ ಸರ್ಕಾರಗಳ ಚುನಾಯಿತ ಪ್ರತಿನಿಧಿಗಳ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ, ನೋಡಲ್ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿ ತರಬೇತಿಯು ಪರಿಣಾಮಕಾರಿಯಾಗಿ ತಳಮಟ್ಟದಿಂದ ಸ್ಥಳೀಯವಾಗಿ ನಡೆಯಬೇಕು. ಹಾಗೂ ಇದಕ್ಕೆ ಸಂಬಂಧಿಸಿದಂತೆ ಹಣಕಾಸು ಆಯಾ ಹಂತದ ಸರ್ಕಾರಗಳಿಗೆ ವರ್ಗವಾಗಬೇಕು. ಆಯಾ ಹಂತದ ಸಾಮರ್ಥ್ಯಾಭಿವೃದ್ಧಿ ತರಬೇತಿಯ ಬಗ್ಗೆ ಯೋಜನೆ ಆಯಾ ಹಂತದಲ್ಲಿಯೇ ತಯಾರಾಗಬೇಕು.

4. **ಯಾವುದೇ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯ ಹಕ್ಕು ಮತ್ತು ಅಧಿಕಾರ ಗ್ರಾಮ ಸಭೆಯದ್ದು**
   ಸಂವಿಧಾನಾತ್ಮಕವಾಗಿ ಹಾಗೂ ಗ್ರಾಮ ಸ್ವರಾಜ್ ಕಾಯಿದೆಯ ಪ್ರಕಾರ **ಯಾವುದೇ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯ ಹಕ್ಕು ಮತ್ತು ಅಧಿಕಾರ ಗ್ರಾಮ ಸಭೆ**ಯದ್ದು. (ಉಲ್ಲೇಖ: **3ಇ.** (1), **3ಇ.** 2 **(ಎಫ್), 3ಎಫ್.** (ಸಿ)). ಯಾವುದೇ ಆದೇಶ ಅಥವಾ ಸುತ್ತೋಲೆಗಳನ್ನು ಪರಿಗಣಿಸಿ ಯಾವುದೇ ಕಾರಣಕ್ಕೆ ಈ ಅಧಿಕಾರವನ್ನು ಮೊಟಕುಗೊಳಿಸುವುದು ನಮ್ಮ ಮತದಾರರಿಗೆ ನಾವು ಮಾಡುವ ದ್ರೋಹ. ಉದಾಹರಣೆಗೆ ವಸತಿ ಇಲಾಖೆಯು ಹೊರಡಿಸಿದ ಸುತ್ತೋಲೆಗನುಗುಣವಾಗಿ ಜಾಗೃತ ಸಮಿತಿಗೆ ಫಲಾನುಭವಿಗಳ ಆಯ್ಕೆಯ ನಿರ್ಧಾರದ ಅಧಿಕಾರ ನೀಡಿರುವುದು, ವಿವಿಧ ನಿಗಮಗಳ ಅಡಿಯಲ್ಲಿ ಇರುವ ಸ್ವ–ಉದ್ಯೋಗ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ, ಮಹಿಳಾ ಸಮೃದ್ಧಿ ಯೋಜನೆ ಇತ್ಯಾದಿ ಯೋಜನೆಗಳ ಫಲಾನುಭವಿಗಳ ಆಯ್ಕೆಯ ಅಧಿಕಾರವನ್ನು ಶಾಸಕರಿಗೆ ನೀಡಿರುವುದು ಸಂವಿಧಾನದ ಹಾಗೂ ಗ್ರಾಮ ಸ್ವರಾಜ್ ಕಾಯಿದೆಯ ವಿರುದ್ಧವಾಗಿದೆ.

5. **ಜನಭಾಗವಹಿಸುವಿಕೆಯಲ್ಲಿ ಗ್ರಾಮಸಭೆಯ ಸಹಭಾಗಿತ್ವದೊಂದಿಗೆ ತಯಾರಿಸಿದ ಯೋಜನೆಗಳ ಆಧಾರದ ಮೇಲೆ ರಾಜ್ಯ ಯೋಜನೆ ಮತ್ತು ಬಜೆಟ್‌ಗಳ ತಯಾರಿಕೆ**
   ಗ್ರಾಮ ಪಂಚಾಯತ್ ಮಟ್ಟದಲ್ಲಿ ತಳಮಟ್ಟದಿಂದ ಜನಭಾಗವಹಿಸುವಿಕೆಯಲ್ಲಿ ಗ್ರಾಮ ಸಭೆಯ ಸಹಭಾಗಿತ್ವದಲ್ಲಿ **ಮುನ್ನೋಟ ಯೋಜನೆಗಳು** ತಯಾರಾಗಿವೆ. ಅಲ್ಲದೇ ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಹೇಳಿರುವಂತೆ ಇತರ ಎಲ್ಲಾ ಹಂತದ ಸರ್ಕಾರದ ಯೋಜನೆಗಳು ಗ್ರಾಮ ಸಭೆಯ ಸಹಭಾಗಿತ್ವದಲ್ಲಿ ತಯಾರಿಸಿದ ಈ ಯೋಜನೆಯ ಆಧಾರದ ಮೇಲೆ ರಚಿತವಾಗಬೇಕು. ಮೂರು ಹಂತದ ಸ್ಥಳೀಯ ಸರ್ಕಾರಗಳ ಯೋಜನಾ ಸಮಿತಿಗಳ ರಚನೆಯಾಗಬೇಕು. **(ಉಲ್ಲೇಖ: 42–ಎ; 309; 309–ಎ ಯಿಂದ 309–ಹೆಚ್ ವರೆಗೆ; 310; 310–ಎ; 310–ಬಿ)** ಎಲ್ಲಾ ಜಿಲ್ಲಾ ಯೋಜನಾ ಸಮಿತಿಗಳಿಂದ ಈಗಾಗಲೇ ಗ್ರಾಮ ಪಂಚಾಯತ್‌ಗಳಲ್ಲಿ ತಯಾರಾದ ಮುನ್ನೋಟ ಯೋಜನೆಗಳು ರಾಜ್ಯ ಆಯವ್ಯಯ ಅಧಿವೇಶನದ ಮೊದಲು ರಾಜ್ಯ ಯೋಜನಾ ಸಮಿತಿಗೆ ತಲುಪಿ

ಕ್ರೋಢೀಕರಣವಾಗಬೇಕು. ಇದರ ಆಧಾರದ ಮೇಲೆ ರಾಜ್ಯ ಆಯವ್ಯಯ ಯೋಜನೆ ತಯಾರಾಗಬೇಕು. ಆಗ ಮಾತ್ರ ಈ ಯೋಜನಾ ತಯಾರಿಕೆಯ ಪ್ರಕ್ರಿಯೆಗಳಿಗೆ ಅರ್ಥಬರುತ್ತದೆ ಹಾಗೂ ತಳಮಟ್ಟದಿಂದ ತಯಾರಾದ ಯೋಜನೆಗಳು ರಾಜ್ಯ ಮಟ್ಟದ ಯೋಜನೆಯೊಳಗೆ ಅಡಕವಾಗಿ ಪರಿಣಾಮಕಾರಿ ಆಯವ್ಯಯ ಯೋಜನೆ ತಯಾರಿಸಲು ಸಾಧ್ಯವಾಗುತ್ತದೆ. ಇದಾದನಂತರ ಈ ಯೋಜನೆಗಳನ್ನು 5 ವರ್ಷಗಳಲ್ಲಿ ಹೇಗೆ ಅನುಷ್ಟಾನಗೊಳಿಸುವುದು ಎಂದು ರಾಜ್ಯಮಟ್ಟದ ಕಾರ್ಯತಂತ್ರ ರೂಪಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಅನುಷ್ಟಾನ ಪ್ರಕ್ರಿಯೆಗೆ ಪೂರಕವಾಗಿ ಎಲ್ಲಾ ಹಂತದ ಸರ್ಕಾರಗಳಿಗೆ 3 ಎಫ್‌ಗಳ (ಹೊಣೆಗಳು, ಹೊಣೆಗಾರರು ಮತ್ತು ಹಣಕಾಸು) ಹಸ್ತಾಂತರವಾಗಬೇಕು